## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2949\2017\ಉನಿವಿ-4    ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:03/02/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಪಿ.ನಾಗರಾಜೇ ಅರಸ್ ಬಿನ್ ಕೆ.ಪುಟ್ಟರಾಜೇ ಅರಸ್, ಅಲಗೂಡು ಗ್ರಾಮ, ಟಿ.ನರಸೀಪುರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅಲಗೂಡು ಗ್ರಾಮದ ನಿವಾಸಿಯಾದ ಶ್ರೀ.ಪಿ.ನಾಗರಾಜೇ ಅರಸ್ ಬಿನ್ ಕೆ.ಪುಟ್ಟರಾಜೇ ಅರಸ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ತಹಶೀಲ್ದಾರಾದ ಶ್ರೀ.ಬಸವರಾಜು ಹೆಚ್ ಚೆಗರಿ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅಲಗೂಡು ಗ್ರಾಮದ ಸರ್ವೆ ನಂ.507/2 ಮತ್ತು 200/7 ಹಾಗೂ ಚೌಹಳ್ಳಿ ಗ್ರಾಮದ ಸರ್ವೆ ನಂ.161/4ಬಿ ಜಮೀನುಗಳನ್ನು ತತ್ಕಾಲ್ ಪೋಡಿ ಮಾಡಿಕೊಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಅದೇ ರೀತಿ, ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ ಮಾಡಲಾದ ಪೋಡಿ ಕಾರ್ಯವು ಸಹ ವಾಸ್ತವಾಂಶಗಳಿಗೆ ವಿರುದ್ಧವಾಗಿದೆಯೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

S/d
7/2/18

ಸರ್ವೆ ನಂ.200ರಲ್ಲಿ ಆಕಾರ್‌ಬಂದ್‌ನಂತೆ 200/1ರಲ್ಲಿ 1 ಎಕರೆ, 200/2ರಲ್ಲಿ 2 ಎಕರೆ, 200/3ರಲ್ಲಿ 0–04 ಗುಂಟೆ, 200/4ರಲ್ಲಿ 1 ಎಕರೆ, 200/5ರಲ್ಲಿ 7 ಗುಂಟೆ, 200/6ರಲ್ಲಿ 0–33.08 ಗುಂಟೆ ಮತ್ತು 200/7ರಲ್ಲಿ 0–39.08 ಗುಂಟೆ ಚಾಲ್ತಿ ಆರ್‌ಟಿಸಿ ಇಂಡೀಕರಣವಾಗಿದೆ. ಸರ್ವೆ ನಂ.507ರ ಆಕಾರ್‌ಬಂದ್‌ನಂತೆ 507/1ರಲ್ಲಿ 0.28 ಗುಂಟೆ, 507/2ರಲ್ಲಿ 0.25 ಗುಂಟೆ, 507/3ರಲ್ಲಿ 0.24 ಗುಂಟೆ, 507/4ರಲ್ಲಿ 0.24 ಗುಂಟೆ, 507/5ರಲ್ಲಿ 1–09 ಗುಂಟೆ, 507/6ರಲ್ಲಿ 1–16 ಗುಂಟೆ ಮತ್ತು 507/7ರಲ್ಲಿ 0–03 ಗುಂಟೆ ಎಂದು ಆರ್‌ಟಿಸಿ ಇಂಡೀಕರಣವಾಗಿದೆ. ಸರ್ವೆ ನಂ.200/7ರ ಆರ್‌ಟಿಸಿ ಕಾಲಂ 11ರಲ್ಲಿ 7 ಗುಂಟೆ ಜಮೀನು ನಾಲೆಗೆ ಭೂ ಸ್ವಾಧೀನವಾಗಿರುತ್ತದೆಂದು ನಮೂದಾಗಿರುವುದನ್ನು ರದ್ದುಪಡಿಸಲು ಹಾಗೂ ಸರ್ವೆ ನಂ.507/2ರಲ್ಲಿ 0–03 ಗುಂಟೆ ರದ್ದುಪಡಿಸಿ, ದೂರುದಾರರ ತಂದೆಯ ಹೆಸರಿಗೆ ದಾಖಲು ಮಾಡಲು ಅನುಮತಿ ಕೋರಿ ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಪತ್ರ ಬರೆದಿದೆ. ಪ್ರಸ್ತುತ ಈ ಎಲ್ಲಾ ಪ್ರಕ್ರಿಯೆಗಳು ಪ್ರಗತಿಯ ಹಂತದಲ್ಲಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರಿಗೆ ನೋಟೀಸ್ ಜಾರಿಯಾಗಿ ಒಂದು ತಿಂಗಳಾದರೂ ಸರ್ವೆ ನಂ.507/2 ಮತ್ತು 200/7ರ ಆರ್‌ಟಿಸಿ ಗೆ ತಿದ್ದುಪಡಿ ಮಾಡುವುದಕ್ಕೆ ಚೆಕ್‌ಲಿಸ್ಟ್ ತಯಾರಿಸದೇ ಬೇಜವಾಬ್ದಾರಿತನವನ್ನು ತೋರಿದ್ದಾರೆ. ಆದಕಾರಣ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಅಲಗೂಡು ಗ್ರಾಮದ ಸರ್ವೆ ನಂ.507/2 ಮತ್ತು 200/7 ಹಾಗೂ ಚೌಹಳ್ಳಿ ಗ್ರಾಮದ ಸರ್ವೆ ನಂ.161/4ಬಿ ಜಮೀನುಗಳು ನಾಲೆಗೆ ಭೂ ಸ್ವಾಧೀನವಾಗಿದೆಯೆಂದು ಆರ್‌ಟಿಸಿ ಯಲ್ಲಿ ಇಂಡೀಕರಣವಾಗಿಲ್ಲ ಎನ್ನುವುದು ದೂರಾಗಿದೆ. ಅಲಗೂಡು ಗ್ರಾಮದ ಸರ್ವೆ ನಂ.507/2 ಮತ್ತು 200/7ರ ಜಮೀನುಗಳ ಆರ್‌ಟಿಸಿ ತಿದ್ದುಪಡಿಗಾಗಿ ಆಕಾರ್ ಬಂದ್‌ನಂತೆ ಕ್ರಮವಹಿಸಲಾಗುವುದು ಮತ್ತು ಅದಕ್ಕೆ ಉಪವಿಭಾಗಾಧಿಕಾರಿಗಳ ಅನುಮೋದನೆಯಾಗಬೇಕಿದೆಯೆಂದು ಎದುರುದಾರರು ಹೇಳಿದ್ದು, ಸದರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಆರ್‌ಟಿಸಿ ಅನ್ನು ತಿದ್ದುಪಡಿ ಮಾಡಲು ಅನುಮೋದನೆ ಕೋರಿ ದಿ:09/11/17ರಂದು ಎದುರುದಾರರು ಉಪವಿಭಾಗಾಧಿಕಾರಿಗಳಿಗೆ ಪತ್ರವನ್ನು ಕಳುಹಿಸಿದ್ದಾರೆ.

Sd/-

6. ಆದ್ದರಿಂದ, ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಅಲಗೂಡು ಗ್ರಾಮದ ಸರ್ವೆ ನಂ.507/2 ಮತ್ತು 200/7 ಸ್ವತ್ತು ಕಬಿನಿ ಬಲದಂಡೆ ನಾಲೆಯ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನವಾದ ಬಗ್ಗೆ ಆರ್‌ಟಿಸಿ ಯಲ್ಲಿ ಇಂಡೀಕರಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

14/2/18

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**